# ಸಂಪಾದಕೀಯ



## ಕನ್ನಡದ ಕಣ್ಮಣಿಗಳು : ಹರಿದಾಸರು

ಹಂಪಿಯಲ್ಲಿರುವ ಪುರಂದರ ಮಂಟಪ

### ಮಾಧುರ್ಯ ಪ್ರತಿಮಾರೂಪಗಳು

'ಕರ್ನಾಟಕ' ಎನ್ನುವುದು ಕೇವಲ ಒಂದು ಭೂಭಾಗದ ಪರಿಕಲ್ಪನೆಯಲ್ಲ. ಅದು ಅತ್ಯಂತ ಸಮೃದ್ಧವಾದ ಪರಂಪರೆಯ ದ್ಯೋತಕ; ಸಂಸ್ಕೃತಿಯ ಸಂಕೇತ. ಹಾಗೆಯೇ ಕನ್ನಡವೆಂಬುದು ಬರಿಯ ಭಾಷೆಯಲ್ಲ; ಕರ್ನಾಟಕದ ಜೀವನಾಡಿಯನ್ನು ಪ್ರತಿಬಿಂಬಿಸುವ ಸಂಪದ್ಭರಿತ ಮಾಧ್ಯಮ; ಇಲ್ಲಿನ ಜನರ ಆಶೋತ್ತರಗಳನ್ನೂ ಕನಸುಗಳನ್ನೂ ಸಾಧನೆಗಳನ್ನೂ ಹೃದಯವಂತಿಕೆಯನ್ನೂ ಆಧ್ಯಾತ್ಮಿಕ ಗಭೀರತೆಯನ್ನೂ, ಶೌರ್ಯವೀರ್ಯೌದಾರ್ಯಗಳನ್ನೂ ದಾಖಲಿಸಿದ ಶಕ್ತಿಶಾಲಿ ಸಾಧನ. ಹೀಗೆಂದೇ 'ಕರ್ನಾಟಕ', 'ಕನ್ನಡ' ಇವೆರಡೂ ಕರುನಾಡವರ ಪಾಲಿಗೆ ನಿರ್ಜೀವ ಪದಗಳಲ್ಲ. ಬೆರಗುಗೊಳಿಸುವ, ಹೃದಯವರಳಿಸುವ, ಧನ್ಯತೆ ಮೂಡಿಸುವ, ಭಕ್ತಿಭಾವವನ್ನು ಉದ್ದೀಪಿಸುವ, ಗೌರವದಿಂದ ತಲೆಬಾಗಿಸುವಂತೆ ಮಾಡುವ ಮಾನಸಿಕ, ಬೌದ್ಧಿಕ, ಆಧ್ಯಾತ್ಮಿಕ ಮುಂತಾದ ಹತ್ತುಹಲವು ಆಯಾಮಗಳನ್ನು ತಳೆದ **ಮಾಧುರ್ಯ ಪ್ರತಿಮಾರೂಪಗಳು.**

ಕನ್ನಡಿಗನೊಬ್ಬನು ತನ್ನ ಪರಂಪರೆಯ ಕೂಸು; ತನ್ನ ನೆಲದಲ್ಲಿ ಆಗಿಹೋದ ಧಾರ್ಮಿಕ, ರಾಜಕೀಯ, ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಆಂದೋಲನಗಳ ವಾರಸುದಾರ. ಹೀಗಾಗಿ ಅವನ ಲೌಕಿಕ ಮನೋಭೂಮಿಕೆಯು ತನ್ನ ನಾಡಿನ ರಾಜಕೀಯ, ಸಾಹಿತ್ಯ ಪರಂಪರೆಗೆ ಪ್ರತಿಸ್ಪಂದಿಸಿದರೆ, ಆತನ ಬುದ್ಧಿ ಇಲ್ಲಿನ ಚಿಂತಕರ ತಾತ್ತ್ವಿಕ ಗಂಭೀರತೆಯನ್ನು ವಿಶ್ಲೇಷಿಸುತ್ತದೆ. ಆದರೆ ಎಲ್ಲಕ್ಕಿಂತ ಮಕುಟಪ್ರಾಯವಾಗಿ, ಆತನ ಆಧ್ಯಾತ್ಮಿಕ ತುಮುಲವು ಶತಶತಮಾನಗಳಿಂದ ಇಲ್ಲಿ ನಿರ್ಮಾಣಗೊಂಡಿರುವ ಅತಿಶಯ ಆಧ್ಯಾತ್ಮಿಕ ಅನುಭಾವದ ಜೊತೆಗೆ ಸಂಸರ್ಗ ಹೊಂದಲು ಹಾತೊರೆಯುತ್ತದೆ.

ಉಳಿದೆಲ್ಲ ಹೆಗ್ಗಳಿಕೆಗಳಿಗಿಂತಲೂ ಈ ನಾಡಿನ ಹೆಚ್ಚುಗಾರಿಕೆ ಇರುವುದು ಇದರ ಧಾರ್ಮಿಕ ಸಮೃದ್ಧತೆಯಲ್ಲಿ, ಮತೀಯ ಔದಾರ್ಯದಲ್ಲಿ, ಆಧ್ಯಾತ್ಮಿಕ ಔನ್ನತ್ಯದಲ್ಲಿ. ಜೈನ ಶೈವ ವೈಷ್ಣವ, ದ್ವೈತ ವಿಶಿಷ್ಟಾದ್ವೈತ ಅದ್ವೈತ, ಹಿಂದೂ ಕ್ರೈಸ್ತ ಇಸ್ಲಾಂ ಹೀಗೆ ಎಲ್ಲ ಧಾರ್ಮಿಕ ಪಂಗಡಗಳ, ಮತಧರ್ಮಗಳ ಆಡುಂಬೊಲವಾಗಿದ್ದ ಕನ್ನಡ ತಾಯಿಯ ಮಡಿಲು, ಆಧುನಿಕ ಕಾಲದಲ್ಲಿ ರಾಮಕೃಷ್ಣ–ವಿವೇಕಾನಂದರ ಆಂದೋಲನವನ್ನೂ ತನ್ನೆಡೆಗೆ ಸೆಳೆದುಕೊಂಡ ಪರಿ ಅತ್ಯಂತ ಸಹಜವಾದುದು, ಅಷ್ಟೇ ಮನೋಜ್ಞವಾದುದು. ಜೈನ ವೀರಶೈವರ ತತ್ತ್ವ–ಸಾಧನೆ–ಸಿದ್ಧಿಗಳ ತಾಣವಾಗಿರುವ ಕರ್ನಾಟಕವು ಆಚಾರ್ಯತ್ರಯರ ಆಧ್ಯಾತ್ಮಿಕ ಭೂಮಿಕೆಯೂ ಆಗಿದ್ದುದು ಅತ್ಯಂತ ವಿಶಿಷ್ಟ ಸಂಗತಿ. ಇದರ ಆತ್ಮೀಯ ಪರಿಚಯವೇ ಈ ಸಂಚಿಕೆಯ ಹೂರಣ.

### ಅಚ್ಚಕನ್ನಡದ ಶಿಶುಗಳು

ಕರ್ನಾಟಕದ ಆಧ್ಯಾತ್ಮಿಕ ಪರಂಪರೆಯಲ್ಲಿ ಹರಿದಾಸರದು ವಿಶಿಷ್ಟ ಸ್ಥಾನ. ಅವರು ಆಧರಿಸಿದ ತತ್ತ್ವವೋ ಕನ್ನಡ ನೆಲದಲ್ಲಿಯೇ ಜನ್ಮತಳೆದ ಶ್ರೀಮಧ್ವಾಚಾರ್ಯರ ದ್ವೈತಸಿದ್ಧಾಂತ.



ಪುರಂದರದಾಸರು

ಅವರ ಸಾಧನೆಯೆಲ್ಲ ಕರ್ನಾಟಕದಲ್ಲಿಯೇ. ಅವರ ಕಳಕಳಿಯೆಲ್ಲ ಈ ನಾಡವರ ಸಾಮಾಜಿಕ ಹಾಗೂ ಆಧ್ಯಾತ್ಮಿಕ ಹಿತಕ್ಕಾಗಿಯೇ. ಬ್ರಾಹ್ಮಣಜನಿತವಾದರೂ, ಸಮಾಜದ ಎಲ್ಲ ವರ್ಗದವರನ್ನೂ ಬರಮಾಡಿಕೊಂಡು, ಭಕ್ತಿಸುಧಾಪ್ರವಾಹವನ್ನು ಹರಿಸಿದ ಹಿರಿಮೆ ಇವರದು. ಮಾಧ್ವತತ್ತ್ವವನ್ನು ಸಾರ್ವಜನಿಕವಾದ ಭಕ್ತಿ ಆಂದೋಲನದ ಕಾಲುವೆಗಳಲ್ಲಿ ಹರಿಸಿ, ಸಹಸ್ರಾರು ಶ್ರೀಸಾಮಾನ್ಯರ ಜೀವನಕ್ಕೆ ಸಂಜೀವನಿಯಾದ ಮಹಾತ್ಮರು ಈ ಹರಿದಾಸರು. ಅವರ ಕನ್ನಡಪ್ರೇಮ, ಅಭಿಮಾನ ಅಸದಳ. ಅದು ಜಗನ್ನಾಥದಾಸರ ಈ ಪದ್ಯದಲ್ಲಿ ಹೊರಹೊಮ್ಮಿದೆ:

**ಕೃತಿಪತಿಕಥಾನ್ವಿತವೆನಿಪ ಪ್ರಾ–**
**ಕೃತವೇ ತಾ ಸಂಸ್ಕೃತವೆನಿಸಿ ಸ**
**ದ್ಗತಿಯನೀವುದು ಭಕ್ತಿಪೂರ್ವಕ ಕೇಳಿ ಪೇಳ್ವರಿಗೆ**

(*ಹರಿಕಥಾಮೃತಸಾರ,* ೧೭–೩೬)

ಹರಿದಾಸರಲ್ಲಿ, ಸರ್ವಸಂಗಪರಿತ್ಯಾಗಿಗಳಾಗಿದ್ದ **ಸಂನ್ಯಾಸಿ ವರ್ಗ**ವೊಂದು ಕಡೆ; ಸಂಸಾರಾಸಕ್ತಿಯನ್ನು ಪರಿತ್ಯಾಗ ಮಾಡಿ, ಹರಿಚರಣವನ್ನೇ ಆಶ್ರಯಿಸಿ ಬದುಕುತ್ತಿದ್ದ **ಗೃಹಸ್ಥವರ್ಗ**ವೊಂದು ಕಡೆ. ಹರಿದಾಸ ಪರಂಪರೆಯಲ್ಲಿ ಆದ್ಯರಾದ ಶ್ರೀನರಹರಿ ತೀರ್ಥರು, ಪ್ರವರ್ತಕರಾದ ಶ್ರೀಪಾದರಾಜರು, ಉತ್ತೇಜಕರಾದ ವ್ಯಾಸರಾಯರು, ಉದ್ಧಾರಕರಾದ ಶ್ರೀವಾದಿರಾಜರು, ಆರಾಧ್ಯ ದೈವವೇ ಆಗಿಬಿಟ್ಟ ಶ್ರೀರಾಘವೇಂದ್ರ ತೀರ್ಥರು ಮುಂತಾದ ಯತಿಶ್ರೇಷ್ಠರು ಸಂಸ್ಕೃತದಲ್ಲಿಯೂ ಉದ್ದಾಮ ಪಂಡಿತರು. ಅವರಲ್ಲಿ ಕೆಲವರು ಹಲವು ಪಾಂಡಿತ್ಯಪೂರ್ಣ ಕೃತಿಗಳನ್ನೂ ರಚಿಸಿದರು. ಆದರೆ ಅವರ ಹೃದಯವೆಲ್ಲ ಕನ್ನಡತಾಯಿಗೆ ರತ್ನಹಾರವನ್ನು ತೊಡಿಸುವ ಕೈಂಕರ್ಯದತ್ತವೇ ಇತ್ತು. ಹಾಗೆಂದೇ ಸರಳ ಸುಮನೋಹರ ಪದ್ಯಗಳು ಅವರ ಮುಖಾರವಿಂದದಿಂದ ಹೊರಹೊಮ್ಮಿದುದರಲ್ಲಿ ಆಶ್ಚರ್ಯವೇ ಇಲ್ಲ.

ಅವರಲ್ಲಿ, ಶ್ರೀನರಹರಿತೀರ್ಥರು, **"ಹರಿಯೇ, ಇದು ಸರಿಯೇ, ಚರಣಸೇವಕನಲ್ಲಿ ಕರುಣಬಾರದ್ಯಾಕೆ"** ಎಂದು ಕೇಳಿಕೊಳ್ಳುತ್ತಾರೆ; ಶ್ರೀಪಾದರಾಜರು, **"ನಾ ನಿನಗೇನು ಬೇಡುವುದಿಲ್ಲ, ಎನ್ನ ಹೃದಯ ಮಂಟಪದೊಳು ನಿಂದಿರೋ ಕೃಷ್ಣ"** ಎಂದು ಹರಿಯನ್ನು ಬೇಡಿಕೊಳ್ಳುತ್ತಾರೆ; ಶ್ರೀವ್ಯಾಸರಾಜರು, **"ಸಂಸಾರವೆಂಬ ಮಾರಿಗೆ ಸಿಲುಕದಂತೆ ಕಂಸಾರಿ ಕರುಣದಿಂದೆನ್ನ ನೋಡಯ್ಯ"** ಎಂದು ಪ್ರಾರ್ಥಿಸಿಕೊಳ್ಳುತ್ತಾರೆ; ವಾದಿರಾಜತೀರ್ಥರು, **"ಇನ್ನು ಹಯವದನ ಎನ್ನಿಹ ಪರಗತಿಗೆ ನಿನ್ನ ಕಾರುಣ್ಯ ಕಾರಣವೋ, ಅನ್ಯಥಾವರಿಯೆ ಶರಣ್ಯ ನೀ ಕೈಪಿಡಿದು, ಎನ್ನ ರಕ್ಷಿಪ ಭಾರ ನಿನ್ನದಯ್ಯಾ"** ಎಂದು ಹಲುಬುತ್ತಾರೆ; ಶ್ರೀರಾಘವೇಂದ್ರ ಸ್ವಾಮಿಗಳು, **"ಇಂದು ಎನಗೆ ಗೋವಿಂದ, ನಿನ್ನಯ ಪಾದಾರವಿಂದವ ತೋರೋ, ಮುಕುಂದನೇ"** ಎಂದು ಮೊರೆಯಿಡುತ್ತಾರೆ.

ಇನ್ನುಳಿದವರೆಲ್ಲ ಸಂಸಾರವಂದಿಗರು. ಆದರೂ ಕೆಸರಿನಲ್ಲಿ ಹುಟ್ಟಿ ಬೆಳೆವ ಕಮಲದಂತೆ ಪ್ರಾಪಂಚಿಕ ಕೊಳೆಯನ್ನು ಸ್ವಲ್ಪವೂ ಅಂಟಿಸಿಕೊಳ್ಳದವರು. ಶ್ರೀಪುರಂದರದಾಸರು, ಶ್ರೀಕನಕದಾಸರು, ಶ್ರೀವೈಕುಂಠದಾಸರು, ಶ್ರೀವಿಜಯದಾಸರು, ಶ್ರೀಪ್ರಸನ್ನವೆಂಕಟದಾಸರು, ಶ್ರೀಗೋಪಾಲದಾಸರು, ಶ್ರೀಜಗನ್ನಾಥದಾಸರು ಮುಂತಾದವರಿಗೆ ಶ್ರೀಹರಿಯ ಸ್ತುತಿಯು ಸವಿಗನ್ನಡದ ಪದಗಳ ಮೂಲಕವೇ ಆಗಬೇಕು; ಪ್ರಾರ್ಥನೆಯ ಭಾವ ಕನ್ನಡ ಭಾಷೆಯಲ್ಲಿಯೇ ಬರಬೇಕು; ತತ್ತ್ವ ಕನ್ನಡದಲ್ಲಿಯೇ ಮೈದೋರಬೇಕು; ಸಾಧನೆಯ ಮರ್ಮವೂ ಕನ್ನಡ ಮಾತಿನಲ್ಲಿಯೇ ಮೂಡಬೇಕು. ಹೀಗೆ ನಮ್ಮ ಹರಿದಾಸರು ಅಚ್ಚಕನ್ನಡದ ಶಿಶುಗಳು; ನಾಡು ಹೆಮ್ಮೆಪಡುವ ಮಹಾತ್ಮರು.

### ಭಗವತ್ ತತ್ತ್ವ

ಹರಿದಾಸರಿಗೆ ಮಧ್ವತತ್ತ್ವವೇ ಚಿರಂತನ ಸ್ಫೂರ್ತಿಯ ಸೆಲೆ. ಹರಿಯೇ ಅವರಿಗೆ ಸರ್ವೋತ್ತಮ. ಅವರ ಪ್ರಶಂಸೆಗಳೆಲ್ಲವೂ ಅವನಿಗೇ ಮಿಸಲು. ಶ್ರೀಪುರಂದರದಾಸರು ಇದನ್ನು ಸ್ಪಷ್ಟವಾಗಿ ಹೇಳುತ್ತಾರೆ:

**ಹರಿಯೇ ಸರ್ವೋತ್ತಮ, ಹರಿಯೇ ಪರದೇವತೆ**
**ಹರಿಸರ್ವವಿಶ್ವಮಯಂ ಜಗತು**
**ಹರಿಯಿಲ್ಲದನ್ಯ ದೈವಗಳಿಲ್ಲವೆಂದು**
**ಉರುಗನ ಹೆಡೆಯನ್ನು ಹಿಡಿದು ಪೇಳುವೆನಯ್ಯ**

**ವಿಶ್ವತೋಮುಖ ನೀನೇ, ವಿಶ್ವತಶ್ಚಕ್ಷು ನೀನೇ**
**ವಿಶ್ವತೋಬಾಹು ವಿಶ್ವಪಾದನು ನೀನೇ**
**ವಿಶ್ವ ಉದರ ನೀನೇ ವಿಶ್ವವ್ಯಾಪಕ ನೀನೇ**
**ವಿಶ್ವನಾಟಕ ಸೂತ್ರಧಾರಿಯೇ ವಿಷ್ಣುವೇ**

ಕನಕದಾಸರು ತಮ್ಮ ಗ್ರಾಮ್ಯಶೈಲಿಯಲ್ಲಿ ಹರಿಯ ಅವತಾರಗಳನ್ನು ಬಣ್ಣಿಸುವ ಪರಿ ಸ್ವಾರಸ್ಯಕರವಾಗಿದೆ:

ದೇವಿ ನಮ್ಮ ದ್ಯಾವರು ಬಂದವ್ರೆ
ಬನ್ನಿರೇ ನೋಡಬನ್ನಿರೇ
ಬನ್ನಿರೇ ನೋಡಬನ್ನಿರೇ
ನೋಡಬನ್ನಿರೇ ನೋಡಬನ್ನಿರೇ

ಕೆಂಗಣ್ಣ ಮೀನನಾಗಿ ನಮ್ಮ ರಂಗಗುಂಗಾಡಿ
ಸೋಮಾನ ಕೊಂದವ್ನ
ಗುಂಗಾಡಿ ಸೋಮನ ಕೊಂದು
ವೇದವ ಬಂಗಾರದೊಡಲಿಗಿತ್ತಾನ್ನ

ದೊಡ್ಡಮಡುವಿನೊಳಗೆ ನಮ್ಮ ರಂಗ ಗುಡ್ಡವ
ಹೊತ್ತುಕೊಂಡು ನಿಂತಾನ್ನ
ಗುಡ್ಡವ ಹೊತ್ತುಕೊಂಡು ನಿಂತು
ಸುರರನ್ನು ದೊಡ್ಡವರನು ಮಾಡಾನ್ನ

ಭಗವಂತನಿಗೆ ಅನಂತಗುಣಗಳು, ಹಾಗೆಯೇ ಅನಂತ ರೂಪಗಳು. ಅವುಗಳು ಅವತಾರಗಳಲ್ಲಿ ಪ್ರಕಟಗೊಂಡಿವೆ. ಅವುಗಳನ್ನು ನಮ್ಮ ಹರಿದಾಸರು ಎತ್ತಿ ಎತ್ತಿ ಹಾಡಿ ಹೊಗಳುವರು. ಅದರಲ್ಲೂ ಸಂಪ್ರದಾಯದ ಪ್ರಕಾರವಾಗಿ, ಭಗವಂತನ ೨೪ ರೂಪಗಳ ವರ್ಣನೆ, ಕೃಷ್ಣ, ನರಸಿಂಹ, ಕಪಿಲ, ವರಾಹ, ಹಯಗ್ರೀವ, ವೇದವ್ಯಾಸ ಮುಂತಾದ ಅವತಾರಗಳ ವರ್ಣನೆಯನ್ನು ಅವರು ವಿಶೇಷವಾಗಿ ಮಾಡುತ್ತಾರೆ. ಹಾಗೆಯೇ ಭಗವಂತನ ವಿಶೇಷ ಆರಾಧನಾಮೂರ್ತಿಗಳಾದ ವಿಠ್ಠಲ, ಹರಿಹರ, ವೆಂಕಟೇಶ, ವರಾಹ, ಮೂಲನಾರಾಯಣರ ಸ್ತುತಿಯೂ ಅವರ ಕೃತಿಗಳಲ್ಲಿ ಕಂಡುಬರುತ್ತದೆ. ಆದರೆ 'ಉಡುಪಿಯ ಕೃಷ್ಣ', ಹರಿದಾಸರ ಒಲವಿನ ಚಿಣ್ಣ. ಈ ಕಡೆಗೋಲ ಗೋಪಾಲನನ್ನು ಎಷ್ಟು ಬಣ್ಣಿಸಿದರೂ ತೃಪ್ತಿಯಿಲ್ಲ, ಹರಿದಾಸರಿಗೆ.

ಕಂಡೆನಾ ಉಡುಪಿಯ ಕೃಷ್ಣರಾಯನ್ನ ಭೂ
ಮಂಡಲದೊಳಗೆ ಉದ್ದಂಡ ಮೋಹಿಪನ

ಉಂಗುರ ಉಡಿದಾರ ಉಡಿಗಂಟೆ ನಾ ಕಂಡೆ
ನಾನು ರಂಗ ಮಾಣಿಕ್ಯದ ಮಾಲೆ ಕಂಡೆ
ಧಿಂಧಿಮಿಧಿಮಕೆಂದು ಕುಣಿವ ಕೃಷ್ಣನ್ನ ಕಂಡೆ
ನಾನು ಪುರಂದರ ವಿಠಲನ್ನ ಪಾದಕಮಲವ ಕಂಡೆ

ಬಾಲಕೃಷ್ಣನ ಲೀಲೆಗಳಂತೂ ಹರಿದಾಸರ ಪಾಲಿಗೆ ಪಾಡುವುದಕ್ಕೆ ರಸಕವಳವಾಗಿಬಿಡುತ್ತವೆ; ಮನನಕ್ಕೆ ಮಂಡಿಗೆಯಾಗಿ ನಿಲ್ಲುತ್ತವೆ. ಹೊರಗೆ ಆಟವಾಡಿ ಬಂದ ಕೃಷ್ಣನನ್ನು ಯಶೋದೆಯು ನಿಂದಿಸುವುದನ್ನು ಶ್ರೀಪಾದರಾಜರ ನುಡಿಗಳಲ್ಲಿ ಕೇಳೋಣ:

ಎಲ್ಲಾಡಿ ಬಂದೆ ಎನ್ನ ಕೃಷ್ಣಯ್ಯ ನೀ
ಎಲ್ಲಾಡಿ ಬಂದೆ ಎನ್ನ ರಂಗಯ್ಯ
ಬಾಲಯ್ಯ ನೀ ಎನ್ನ ಕಣ್ಣ ಮುಂದಾಡದೆ
ಆಲಯುದೊಳಗೆ ನೀನಾಡದೆ ಬೆಣ್ಣೆ ಪಾಲು ಸಕ್ಕರೆ
ನೀ ಬೇಡದೆ ಇಲ್ಲಿ

ಪುರಂದರದಾಸರಂತೂ ಗೋಕುಲದ ಪರಿಸರವನ್ನೇ ನಮ್ಮ ಮನಃಪಟಲದಲ್ಲಿ ನಿಲ್ಲಿಸಿಬಿಡುತ್ತಾರೆ. ಕೃಷ್ಣ ತನ್ನ ಮನೆಯಲ್ಲಿ ಮಾಡಿದ ರಂಪಾಟ ಕಂಡು ರೇಗಿದ ಗೋಪಿಯೊಬ್ಬಳು ಸಿಡಿಮಿಡಿಗುಟ್ಟುವ ಬಗೆ ಇದು:

ಅಡಿಗೆಮನೆಯಲ್ಲಿ ಗಡಬಡ ಬರುವುದು ಗಡಿಗೆ
ಒಡೆದು ಹಾಲು ಮೊಸರು ಕುಡಿಯುವುದು

ಹಾಲು ಕೊಡುವ ಬಗೆ ಮೂಲೆಲಿ ಕೂತುಕೊಂಡು
ಹಾಲಿನ ಮೇಲಿನ ಕೆನೆ ಕಾಲಲಿ ತಿಂದು
ಹಾಗಲು ಹೀಗಲು ಮೀಸಲ್ಹಾಕಿನ ಹಾಲು
ಪುರಂದರ ವಿಠಲಗೆ ಸೇರಿತು ಮಾಲು

## ಸಾಧನಾಮಾರ್ಗ

ಹೀಗೆ ಆಧ್ಯಾತ್ಮಿಕ ತತ್ತ್ವ, ಭಗವತ್ಸ್ವರೂಪಗಳು ಮತ್ತು ಲೀಲೆಗಳನ್ನು ವರ್ಣಿಸುವ ಹರಿದಾಸರು, ಸಾಧನೆಯ ಅಂಶಕ್ಕೂ ಅಷ್ಟೇ ಪ್ರಾಮುಖ್ಯತೆ ಕೊಟ್ಟಿದ್ದಾರೆ. ಬೆಳಗಿನಿಂದ ರಾತ್ರಿಯವರೆಗೆ ನಡೆಸಬೇಕಾದ ಧಾರ್ಮಿಕ ಕ್ರಿಯೆಗಳ ಸಮಗ್ರ ಪರಿಚಯ ಅವರ ಕೀರ್ತನೆಗಳ ಮೂಲಕ ನಮಗೆ ಆಗುತ್ತದೆ.

ತಮ್ಮ ಕರ್ನಾಟಕದ ಹರಿದಾಸರು ಎಂಬ ಉದ್ಗ್ರಂಥದಲ್ಲಿ ಡಾ. ಎಚ್. ಕೆ. ವೇದವ್ಯಾಸಾಚಾರ್ಯರು, ಹರಿದಾಸರ ಸಾಧನಾ ಮಾರ್ಗಗಳನ್ನು ನಾಲ್ಕು ವಿಧವಾಗಿ ವಿಭಾಗಿಸಿ ತೋರಿಸಿದ್ದಾರೆ:

೧. ವಿಷಯ ವೈರಾಗ್ಯ: ಈ ಜಗತ್ತಿನ ಆಗುಹೋಗುಗಳು, ರೀತಿನೀತಿಗಳು, ಐಹಿಕ ಜೀವನ ಇವುಗಳಲ್ಲಿ ತೀವ್ರ ಅತೃಪ್ತಿ ಮತ್ತು ಜುಗುಪ್ಸೆ.

೨. ಧರ್ಮಾಚರಣೆ: ವೈರಾಗ್ಯ ಬಲಗೊಂಡಂತೆ, ಅಲೌಕಿಕವೂ ಪಾರಮಾರ್ಥಿಕವೂ ಆದ ವಿಚಾರಗಳಲ್ಲಿ ಶ್ರದ್ಧೆ ಬೆಳೆಸಿಕೊಂಡು, ಅದಕ್ಕೆ ಹೊಂದಿಕೊಂಡಂತಿರುವ ಪೂಜೆ ಮತ್ತು ವ್ರತಾಚರಣೆಗಳಲ್ಲಿ ನಿರತನಾಗಿರುವುದು.

೩. ಹರಿಮಹಿಮೆ ಅಥವಾ ಬ್ರಹ್ಮವಿಚಾರ: ಜಿಜ್ಞಾಸೆ-ಶ್ರವಣ-ಮನನ ಮತ್ತು ಧ್ಯಾನರೂಪವಾದದ್ದು.

೪.ಹರಿಭಕ್ತಿಯ ಮೂಲಕ ಹರಿಯ ಅನುಗ್ರಹ ಸಂಪಾದನೆ.

ಸಾಧನೆಯ ಮೇಲಿನ ವಿವಿಧ ಹಂತಗಳನ್ನು ಹರಿದಾಸರು ತಮ್ಮ ಕೃತಿಗಳಲ್ಲಿ ವಿವರಿಸುತ್ತಾರೆ. ಅವರ ಪ್ರಕಾರ ಜ್ಞಾನಕ್ಕೆ ಭಕ್ತಿ ಹಿನ್ನೆಲೆಯಾಗಿರಬೇಕು. ಜ್ಞಾನವು ಗುರುಗಳಿಂದ ಲಭ್ಯವಾಗಬೇಕು. ಆಗಲೇ ಅದು ಫಲಪ್ರದವಾಗುತ್ತದೆ. ಇದರಿಂದ ಸುಪ್ರೀತನಾದ ಶ್ರೀಹರಿಯು ಬಿಂಬರೂಪದ ತನ್ನ ದರ್ಶನವನ್ನು ಕೊಡುತ್ತಾನೆ. ಇದರಲ್ಲಿ ಮೊದಲ ಮೆಟ್ಟಿಲು ವೈರಾಗ್ಯ.

## ವೈರಾಗ್ಯ

ಹರಿದಾಸರ ಪ್ರಕಾರ ಕರ್ತವ್ಯವಿಮುಖತೆ ವೈರಾಗ್ಯವಲ್ಲ. ಪ್ರಾಪಂಚಿಕ ಜೀವನದ ಇತಿಮಿತಿಗಳನ್ನು ತಿಳಿದುಕೊಂಡು, ತನ್ನ

ಕರ್ತವ್ಯಕ್ಕೆ ಆಧ್ಯಾತ್ಮಿಕ ದಿಶೆಯನ್ನು ಕಲ್ಪಿಸುವುದೇ ನಿಜವಾದ ವೈರಾಗ್ಯ. 'ನಾನು' ಮತ್ತು 'ನನ್ನದು' ಎಂಬ ಅಹಂಕಾರ ಮತ್ತು ಮಮಕಾರಗಳನ್ನು ಬಿಟ್ಟು ಸಂಸಾರದ ಸಂಬಂಧಗಳು ಮತ್ತು ಸುಖಕ್ಕಿಂತಲೂ, ಭಗವಂತನ ಕಾರುಣ್ಯವನ್ನು ಯಾಚಿಸುವುದೇ ವೈರಾಗ್ಯ. ಈ ಭಾವನೆ ಕೆಳಗಿನ ಪದ್ಯಭಾಗಗಳಲ್ಲಿ ವ್ಯಕ್ತವಾಗಿದೆ:

೧. ಗರುವವ್ಯಾತಕೋ ನಿನಗೆ ಪಾಮರ ಮನುಜನೇ

೨. ಏನಬೇಡಲಿ ನಿನ್ನ ಬಳಿಗೆ ಬಂದು,
ನೀನಿತ್ತ ಸೌಭಾಗ್ಯ ನಿಬಿಡವಾಗಿರಲಾಗಿ

೩. ಅಕಟಕಟ ಸಂಸಾರವನು ನೆಚ್ಚಿ ಕೆಡಬೇಡ
ವಿಕಟದಲಿ ಮಾನವರು ಕೆಟ್ಟರೆಲ್ಲರು ನಿಜ

೪. ಸಾಕು ಸಾಕಿನ್ನು ಸಂಸಾರಸುಖವು
ಶ್ರೀಕಾಂತ ನೀನೊಲಿದು ಕರುಣಿಸೈ ಹರಿಯೆ

೫. ನೆಚ್ಚದಿರು ಸಂಸಾರ ಕಡೆಗೆ ಹಾಕುವುದಲ್ಲ
ಮೆಚ್ಚುಗೊಳಿಸುವುದು ವಿಷಯದಲಿ

೬. ಮಂಚ ಬಾರದು ಮಡದಿ ಬಾರಳು
ಕಂಚುಕನ್ನಡಿ ಬಾರದು.
ಸಂಚಿತಾರ್ಥದ ದ್ರವ್ಯ ಬಾರದು,
ಮುಂಚೆ ಮಾಡಿರೋ ಧರ್ಮವ

### ಧರ್ಮಾಚರಣೆ

ಸಾಧನೆಯ ಎರಡನೆಯ ಹಂತವೆಂದರೆ **ಧರ್ಮಾಚರಣೆ**. ವೈರಾಗ್ಯದಿಂದ ಪರಿಪೂತವಾದ ಮನಸ್ಸು, ಭಗವಂತನ ಕಡೆಗೆ ಒಲಿಯುತ್ತದೆ. ಆಗ ಅವನನ್ನು ಒಲಿಸಿಕೊಳ್ಳುವ, ಸ್ಮರಣೆ ಮಾಡುವ ಮತ್ತು ನಿಜಸಾನ್ನಿಧ್ಯದ ಆನಂದವನ್ನು ಹೊಂದುವ ದಾರಿಗಳನ್ನು ಹುಡುಕುತ್ತದೆ. ಅದಕ್ಕಾಗಿ ಗುರುವಿನಿಂದ **ದೀಕ್ಷೆ** ಹೊಂದುವುದು ಅತ್ಯಂತ ಅವಶ್ಯವೆಂದು ಹರಿದಾಸರು ಭಾವಿಸುತ್ತಾರೆ. **ಗುರು ಮುನಿದರೆ ಕಾಯಲರಿಯ ಹರಿಯೆಂಬರು** ಎಂಬ ವಿಜಯದಾಸರ ಉಕ್ತಿ ಇದನ್ನು ಸ್ಪಷ್ಟಪಡಿಸುತ್ತದೆ. ದೀಕ್ಷೆಯ ನಂತರದ ಹಂತ **ಶೌಚ**. ಅಂತರಂಗದ ಶುದ್ಧಿಯೇ ಇಲ್ಲಿ ಪ್ರಧಾನ. ಅದಕ್ಕಾಗಿ ಸ್ನಾನ, ಮಡಿ ಮೊದಲಾದುವು ಸಹಾಯಕಗಳಷ್ಟೆ. ಅನಂತರ **ಮಂತ್ರಾನುಷ್ಠಾನ**. ಬೇರೆಲ್ಲ ಧಾರ್ಮಿಕ ಪಂಗಡಗಳಂತೆ, ಪ್ರಣವ ಜಪಕ್ಕೆ ಹರಿದಾಸರು ಮಹತ್ವವನ್ನು ನೀಡುತ್ತಾರೆ. **ತಾರಮಂತ್ರವ ಜಪಿಸು ತವಕದಿಂದಲಿ ಭವ ತಾರವಾಗುವುದು** ಎನ್ನುವುದು ಅವರ ಬೋಧನೆ. ಇದರ ಜೊತೆಜೊತೆಗೆ **ದೇವತಾರ್ಚನೆ** ಕೂಡ ನಡೆಯಬೇಕು. ಆ ಅರ್ಚನೆಯಲ್ಲಿ ತುಳಸಿಯ ನಿವೇದನೆ, ಆರತಿ, ನೈವೇದ್ಯ ಮುಂತಾದವುಗಳ ಆವಶ್ಯಕತೆ ಮತ್ತು ವರ್ಣನೆಗಳನ್ನು ದಾಸರು ವಿಸ್ತಾರವಾಗಿ ಮಾಡುತ್ತಾರೆ. ಆದರೆ **ಏಕಾಗ್ರತೆ, ಅನುಸಂಧಾನ** ಮತ್ತು **ಭಕ್ತಿಗಳೇ** ಮುಖ್ಯ ಎನ್ನುವುದನ್ನೂ ಎತ್ತಿ ತೋರಿಸುತ್ತಾರೆ. ಈ ಬಗ್ಗೆ ವಿಜಯದಾಸರ ಪದ್ಯ ಮನೋಜ್ಞವಾಗಿದೆ:

ನಿತ್ಯ ತೃಪ್ತ ಸರ್ವಸಾರಭೋಕ್ತ ಪುರುಷೋತ್ತಮ
ಅಚಿಂತ್ಯಮಹಿಮ ಭಕ್ತವತ್ಸಲ
ಸತ್ಯ ಸಂಕಲ್ಪ ಹರಿಗೆ ನಾನೋಪಚಾರದಿಂದ ಭಕ್ತಿ



ಕನಕದಾಸರು

ವೆಗ್ಗಳವಾಗಿ ಮಜ್ಜನಾದಿಯ ಮಾಡಿಸಿ
ಚಿತ್ತ ನಿರ್ಮಲದಿಂದ ನಾನಾ ಸೌಖ್ಯವಾಗಿದ್ದ
ಉತ್ತಮ ಪದಾರ್ಥ ಸುಪಕ್ವೈಸಿ
ಆತ್ಮನ ಮುಂಭಾಗದೊಳಗಿರಿಸಿ
ಸ್ತೋತ್ರಗಳಿಂದ ತುತ್ತು ಸಮರ್ಪಿಸಿ
ಧ್ಯಾನಮಾಡಿ ತೆತ್ತಿಗ ನಾನೆಂದು ಅಡಿಗಡಿಗೆ ಹಿಗ್ಗಿ ..

ಮೇಲಿನವುಗಳ ಜೊತೆಗೆ **ಅತಿಥಿಸತ್ಕಾರ, ಏಕಾದಶಿ ಮುಂತಾದ ವ್ರತಗಳ ಆಚರಣೆ, ತೀರ್ಥಯಾತ್ರೆ** ಇವೆಲ್ಲವೂ ಸಾಧನೆಯ ಅವಿಭಾಜ್ಯ ಅಂಗಗಳು. ಅದಕ್ಕೆ ನಿದರ್ಶನವಾಗಿ ಕೆಳಗಿನ ಪದ್ಯಗಳ ಸಾಲುಗಳನ್ನು ನೋಡಬಹುದು:

ಅತಿಥಿ ಅಭ್ಯಾಗತರ ಸಂತೋಷಪಡಿಸಲು
ಸತತ ಪೊರೆವ ವಿಜಯವಿಠಲ ಮನಸಿನೊಳು (ಅತಿಥಿಸತ್ಕಾರ)

ಏಕಾದಶೀ ವ್ರತವ ಸಾಧಿಸಿ ಶೋಧಿಸಿ,
ಏಕಭಕುತಿಯಿಂದ ಹಾಡಿರೋ ಪಾಡಿರೋ (ವ್ರತ)

ನಿನ್ನ ನೋಡಲು ಬಂದೆ ನಿತ್ಯತೃಪ್ತ (ತೀರ್ಥಯಾತ್ರೆ)

### ಮಾನಸಿಕ ಉಪಾಸನೆ

ವೈರಾಗ್ಯದಿಂದ ಕೂಡಿದ ವ್ಯಕ್ತಿಯು ಧರ್ಮಾಚರಣೆಯ ಕಡೆಗೆ ಒಲವನ್ನು ತೋರಿಸುತ್ತಾನೆ. ಧರ್ಮಾಚರಣೆಯಿಂದ

ಮತ್ತೂ ಪಕ್ವಗೊಂಡ ಸಾಧಕನು ಅದಕ್ಕೂ ಹೆಚ್ಚಿನದಾದ **ಜಿಜ್ಞಾಸೆ, ಶ್ರವಣ, ಮನನ** ಮತ್ತು **ಧ್ಯಾನಗಳಲ್ಲಿ** ತಲ್ಲೀನನಾಗುತ್ತಾನೆ. ಈ ಬಗೆಯ ಮಾನಸಿಕ ಮತ್ತು ಬೌದ್ಧಿಕ ಸಾಧನೆಗಳಿಗೆ ಬೇಕಾದ ಸಕಲ ಸಂಪನ್ಮೂಲ ವಿಷಯಗಳೂ ಹರಿದಾಸರ ಕೃತಿಗಳಲ್ಲಿ ಲಭ್ಯವಾಗುತ್ತವೆ. ಇದರಲ್ಲಿ ಮೊದಲನೆಯದು **ಅಹಂಕಾರತ್ಯಾಗ.** ಅದೇ ಅಂತಃಕರಣ ನೈರ್ಮಲ್ಯದ ಸೋಪಾನ. ಅದಕ್ಕೆಂದೇ ಜಗನ್ನಾಥದಾಸರು, **ಮದಮತ್ಸರ ಬಿಡದಾ ತನಕಾ ವಿಧ ವಿಧ ಸಾಧನ ದಿನದಿನ ಮಾಡಲೇನೋ** ಎಂದಿದ್ದಾರೆ. **ಶ್ರದ್ಧೆ** ಜ್ಞಾನಕ್ಕೆ ಪ್ರಮುಖ ಸಾಧನ. ಹಾಗೆಂದೇ ಶ್ರದ್ಧಾಪೂರ್ವಕವಾದ ಕರ್ಮಕ್ಕೆ ಹರಿದಾಸರು ಮಹತ್ವವನ್ನು ನೀಡುತ್ತಾರೆ. **ಎಲೆ ಮನವೆ, ನಿತ್ಯ ಮಲವ ತೊಳೆಯದಲೆ ಹಲವು ಕರ್ಮಗಳು ಒಲಿದು ಮಾಡಿದರೇನು, ಸುಲಭದ ಸದ್ಗತಿಗೆ ಸೆರೆಯಾಗುದೇನು** ಎಂಬ ವಿಜಯದಾಸರ ಮಾತು ಇಲ್ಲಿ ಸ್ಮರಣಯೋಗ್ಯ.

ಭಾಗವತವೇ ಮುಂತಾದ ಎಲ್ಲ ಧರ್ಮಗ್ರಂಥಗಳೂ **ಸತ್ಸಂಗಕ್ಕೆ** ಅತ್ಯಂತ ಮಹತ್ವವನ್ನು ಕೊಟ್ಟಿವೆ. ಗುರುಗಳ ಸಂಗದಿಂದಲೇ ಜ್ಞಾನ ಸಂಪಾದನೆ ಎಂಬುದು ಎಲ್ಲ ಹರಿದಾಸರ ಮತ. ಕನಕದಾಸರು ಸಜ್ಜನರ ಸಂಗಕ್ಕಾಗಿ ಬೇಡಿಕೊಳ್ಳುವ ಪರಿ ನೋಡಿ:

**ಸಜ್ಜನರ ಸಂಗದೊಳಿರಿಸೆನ್ನ ರಂಗ**
**ದುರ್ಜನರ ಸಂಗ ನಾನೊಲ್ಲೆ ಮಂಗಳಾಂಗ**

**ಆಗಮದ್ವಯವನರಿಯದವ**
**ಸಂಗರೋಗದಲಿ ಆವಾಗ ಮುಳುಗುವನಂಗ**
**ಕಾಗಿನೆಲೆಯಾದಿ ಕೇಶವನ ನೆನೆಯದಿಹ**
**ಭಾಗವತರ ಸಂಗ ಬಲುಭಂಗ ಎಲೊ ರಂಗ**

ಹರಿದಾಸರ ಚಿಂತನೆಯಲ್ಲಿ **ಜ್ಞಾನ** ಮತ್ತು **ಭಕ್ತಿಗಳು** ಅವಿನಾಭಾವ ಸಂಬಂಧ ಹೊಂದಿವೆ. **ಶ್ರೀಮಧ್ವಾಚಾರ್ಯರು ಹೇಳುವಂತೆ, ಭಗವಂತನ ಮಾಹಾತ್ಮ್ಯದ ಜ್ಞಾನದಿಂದ ಉಂಟಾದ ದೃಢತರವಾದ ಸ್ನೇಹವೇ ಭಕ್ತಿ.** ಭಕ್ತಿಯ ಗಳಿಕೆಗೆ ಜ್ಞಾನ ಅತ್ಯವಶ್ಯಕ. ಅದಕ್ಕೆಂದೇ ಮೋಹನದಾಸರು, **ಏನು ಮಾಡಿದರೇನು ಜ್ಞಾನವಿಲ್ಲದೆಲೆ, ಆನೆಗೆ ಮಜ್ಜನವ ಮಾಡಿಸಿದ ತೆರದಿ** ಎಂದು ಹೇಳುತ್ತಾರೆ. ದೃಢತೆಯ ಮನೋಭಾವವೇ ಭಕ್ತಿಯ ತಿರುಳು. ಭಕ್ತಿಪೂರಿತ ಮನದಲ್ಲಿ ವ್ಯಾಕುಲಕ್ಕೆ ಅವಕಾಶವಿಲ್ಲ.

**ಚಿಂತೆ ಮಾಡುವುದಲ್ಲ ಚಿನ್ಮಯಮೂರ್ತಿ ಪಾದ**
**ಕ್ರಾಂತನಾಗಿದ್ದ ಮೇಲೆ, ಎಲೆ ಮನವೆ**
**ಎಂತಾಗುವದೋ ಗತಿ ನಿನಗೆಂದು ವ್ಯಾಕುಲದಿ**
**ಸಂತತ ಬಳಲದಿರು ದೃಢವಾಗಿ ತಿಳಿದು**

ಈ ಬಗೆಯ ದೃಢತೆಯೇ ಜಿಜ್ಞಾಸೆಗೆ ಎಡೆ ಮಾಡಿಕೊಡುತ್ತದೆ. ಜಿಜ್ಞಾಸೆಯೆಂದರೆ ಶಾಸ್ತ್ರಗ್ರಂಥಗಳಲ್ಲಿ ಉಕ್ತವಾದ ಭಗವನ್ಮಹಿಮೆಯನ್ನು ಪುನಃ ಪುನಃ ಕೇಳಿ ತಿಳಿದುಕೊಳ್ಳುವುದು. ಇದರಿಂದ ಹರಿಯಲ್ಲಿ ಮನಸ್ಸು ಸಹಜವಾಗಿ ಹರಿಯುತ್ತದೆ. ಮಾಧ್ವ ಸಂಪ್ರದಾಯದಲ್ಲಿ, ತಾರತಮ್ಯದ ಪ್ರಕಾರ ದೇವತೆಗಳನ್ನು ಸ್ತುತಿಸುವ ಪದ್ಧತಿ ಇದೆ. ಅದನ್ನು ಹರಿದಾಸರು ಕಟ್ಟುನಿಟ್ಟಾಗಿ ಪಾಲಿಸುತ್ತಾರೆ. ರಮಾದೇವಿ ಅಥವಾ ಲಕ್ಷ್ಮಿಯ ಬಗೆಗಿನ ಪುರಂದರದಾಸರ ಈ ಹಾಡನ್ನು ನೋಡಿ:

**ಮದ್ದು ಮಾಡಲರಿಯೇ ಮುದ್ದು ರಮಾದೇವಿ**
**ಮುದ್ದು ಬಾಲಕೃಷ್ಣನಲ್ಲಿ ಮನಸಿದ್ಧವಾಗಿ ನಿಲ್ಲುವಂತೆ**

.................................................................................

**ಎನ್ನೊಡೆಯ ಸಿರಿಪುರಂದರವಿಠಲನ್ನ**
**ಸನ್ನುತಿಯಿಂದ ನಾ ಹಾಡಿ ಪಾಡೋ ಹಾಗೆ**

(*ಮುಂದುವರಿಯುವುದು*)

## ಧನ್ಯಳಾದ ದೀನೆ

**ವಿಜಯದಾಸರು ಕರುಣಾಳುಗಳು. ಅವರು ಬಂದಿಳಿಯಬೇಕಾಗಿದ್ದ ಒಂದು ಗ್ರಾಮದಲ್ಲಿ ಬಾಲವಿಧವೆಯೊಬ್ಬಳು ಜನರಿಂದ ದೂಷಿತಳಾಗಿ ಸಮಾಜದಿಂದ ಬಹಿಷ್ಕೃತಳಾಗಿದ್ದಳು. ಆಕೆಯ ಪಾಪಕೃತ್ಯಕ್ಕಿಂತ ಜನರ ತಿರಸ್ಕಾರವು ನೂರುಮಡಿಯಾಗಿತ್ತು. ಊರಿನ ಪ್ರಮುಖ ಜನರು ಗ್ರಾಮದ ಗಡಿಯಲ್ಲಿ ವಾದ್ಯವೈಭವದಿಂದ ದಾಸರನ್ನು ಸ್ವಾಗತಿಸಲು ಅವರ ಆಗಮನವನ್ನು ನಿರೀಕ್ಷಿಸುತ್ತ ಕಾದಿದ್ದರು. ಅವರಿಗಿಂತ ಮುಂಚಿತವಾಗಿ ಆ ದೀನಳು ಗ್ರಾಮದ ಗಡಿಯನ್ನು ಮೀರಿ ಒಂದು ಮೈಲಿಯಾಚೆಗೆ ಹೋಗಿ, ದಾಸರಿಗಾಗಿ ಎದುರುನೋಡುತ್ತಿದ್ದಳು. ದಾಸರು ಬರುತ್ತಿದ್ದುದನ್ನು ಕಂಡು, ಆಕೆಯು ಒಡನೆ ಓಡಿಹೋಗಿ, ಆ ಮಹಾನುಭಾವರ ಪಾದಗಳಿಗೆ ಎರಗಿ, "ಉದ್ಧರಿಸುವಿರಾದರೆ ಮಾತ್ರವೇ ಪಾದಗಳನ್ನು ಬಿಡುವೆನು. ಇಲ್ಲವಾದರೆ ಪ್ರಾಣ ಬಿಡುವೆ" ಎಂದು ರೋದನ ಮಾಡಿದಳು. ದಾಸರು ವಿಚಾರಿಸಿದಾಗ, ತಾನೊಬ್ಬಳು ದೂಷಿತಳು ಎಂದು ಹೇಳಿಕೊಂಡಳು. ತನ್ನ ಮನೆಗೆ ಬಂದು ಆತಿಥ್ಯ ಸ್ವೀಕರಿಸಬೇಕೆಂದೂ ಇಲ್ಲದಿದ್ದರೆ ಪಾದವನ್ನು ಬಿಡುವುದಿಲ್ಲವೆಂದೂ ಹಟ ಹಿಡಿದಳು. ಹಾಗೆಯೇ ಊರಿನವರು ತನ್ನ ಮೇಲೆ ತೋರಿಸುತ್ತಿರುವ ತಿರಸ್ಕಾರವನ್ನು ಕುರಿತು ಹೇಳಿಕೊಂಡಳು. ಅದಕ್ಕೆ ವಿಜಯದಾಸರು, "ಬೇಕಾದವರು ಬೇಕಾದ ಮಾತನಾಡಲಿ. ನಾವು ನಿನ್ನ ಮನೆಗೆ ಮೊದಲು ಬರುವೆವು" ಎಂದು ಹೇಳಿ, ಅವಳನ್ನು ಕರೆದುಕೊಂಡೇ ಗ್ರಾಮದ ಗಡಿಯ ಬಳಿಗೆ ಬಂದರು. ಗ್ರಾಮಸ್ಥರು ದಾಸರಿಗೆ ವಂದನೆ ಮಾಡಿ ಗ್ರಾಮಪ್ರವೇಶ ಮಾಡಿಸಿದರು. ದಾಸರು ಮೊದಲು ಆ ದೀನಳ ಮನೆಯಲ್ಲಿಯೇ ಆತಿಥ್ಯ ಸ್ವೀಕರಿಸಿದರು. ಆಗ ಮೊದಲು ವಂದಿಸಿದ ಆ ಜನರೇ ಅವರನ್ನು ನಿಂದಿಸಿದರು. ಆದರೆ ಆ ದೀನ ಮಹಿಳೆಯ ಆನಂದಕ್ಕೆ ಎಣೆಯೇ ಇರಲಿಲ್ಲ. ತಾನು ಮಾಡಿಸಿದ ಭಕ್ಷಭೋಜ್ಯಗಳನ್ನು ಊಟಮಾಡುತ್ತಿದ್ದ ದಾಸರು ಮತ್ತು ಅವರ ಶಿಷ್ಯರನ್ನು ನೋಡುತ್ತ ಆನಂದಪಟ್ಟಳು. ಕಡೆಗೆ ತಾನೇ ಕೆನೆಮೊಸರನ್ನು ಬಡಿಸಿದಳು. ದಾಸರ ಕಾರುಣ್ಯದಿಂದ ತಾನು ಧನ್ಯಳಾದೆನೆಂದು ಕಂಬನಿಗೆರೆದಳು. ಇತ್ತ ದಾಸರು ಊಟಮುಗಿಸಲು, ಅತ್ತ ಅದೇ ನಿಮಿಷದಲ್ಲಿ ಆ ಧನ್ಯಾತ್ಮಳ ಪ್ರಾಣಪಕ್ಷಿಯೂ ಹೋಗಿಬಿಟ್ಟಿತು.**

**– ಆಧಾರ: ಬೇಲೂರು ಕೇಶವದಾಸರ 'ಶ್ರೀ ಕರ್ನಾಟಕ ಭಕ್ತವಿಜಯ'**